ಆ) 4,00 000ಲಕ್ಷ ಶೇ 80 ರಂತೆ ಕನ್ನಡ ಪುಸ್ತಕಗಳು ಶೇ10 ರಂತೆ ಇಂಗ್ಲೀಷ್ ಪುಸ್ತಕಗಳು ಶೇ10 ರಂತೆ ಇತರೆ ಭಾಷೆಗಳಾದ ತೆಲಗು, ತಮಿಳು, ಮರಾಠಿ, ಉರ್ದು ಹಾಗೂ ಹಿಂದಿ ಗ್ರಂಥಗಳನ್ನು ಖರೀದಿಸಲಾಗಿದೆ.

ಇ) 860

ಈ) ತುರ್ತಾಗಿ ಮುದ್ರಿಸಬೇಕಾದ ಕೆಲಸಗಳಿಗಾಗಿ ಕೆಳಕಂಡ ಮುದ್ರಣಾಲಯಗಳಿಗೆ ನೀಡಲಾಗುತ್ತಿದೆ.

1) ಮೆ:ಪಯೋನಿಧಿ ಪ್ರಿಂಟರ್ಸ್ ಪ್ಲೈ ಲಿ ಬನಶಂಕರಿ 2ನೇ ಹಂತ ಬೆಂಗಳೂರು
2) ಮೆ:ಎಸ್.ಎಸ್.ಪ್ರೆಸ್ ಓ.ಟಿ.ಸಿ.ರಸ್ತೆ ಬೆಂಗಳೂರು
3) ಮೆ:ಅಮರನಾರಾಯಣ ಪ್ರಿಂಟರ್ಸ್ ಜಿ.ವಿ.ಕೆ. ಐಯ್ಯಂಗಾರ್ ರಸ್ತೆ ಬೆಂಗಳೂರು
4) ಮೆ:ಬಾಲಾಜಿ ಟ್ರೇಡರ್ಸ್ ಕಾಟನ್‌ಪೇಟೆ ಬೆಂಗಳೂರು

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ **ಜೆ.ಹೆಚ್.ಪಟೇಲ್** (ಮುಖ್ಯಮಂತ್ರಿ)ರವರ ಪರವಾಗಿ ಶ್ರೀ.ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಪ್ರಚಾರ ಇಲಾಖೆಯ ಸಚಿವರು) 1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8(3)ನೆ ಪ್ರಕರಣದ ಮೇರೆಗೆ

1) 1998ರ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ತಿದ್ದುಪಡಿ ನಿಯಮಗಳನ್ನು ರಚಿಸುವ ಸಂಬಂಧದಲ್ಲಿ 23ನೇ ಮೇ1998ರಂದು ಹೊರಡಿಸಲಾದ ಡಿಪಿಎಆರ್ 90ಎಸ್‌ಆರ್‌ಡಿ97ನೇ ಸಂಖ್ಯೆಯ ಅಧಿಸೂಚನೆ

ಶ್ರೀ **ಸಿದ್ದರಾಮಯ್ಯ** (ಉಪ ಮುಖ್ಯಮಂತ್ರಿ)ಅವರ ಪರವಾಗಿ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತ ಮತ್ತು ಪ್ರಚಾರ ಇಲಾಖೆ ಸಚಿವರು) 1978ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ ಪ್ರಕರಣ 31ರ ಮೇರೆಗೆ

2) ಕ್ರೂದ್ ಆಯಿಲ್ ಫರ್ನಿಸ್ ಆಯಿಲ್ ಗುಟ್‌ಕಾ ಇನ್ನು ಮುಂತಾದ ವಸ್ತುಗಳ ಮೇಲಿನ ಪ್ರವೇಶ ತೆರಿಗೆಯ ದರಗಳನ್ನು ನಿಗಧಿಪಡಿಸಿದ ಸಂಬಂಧದಲ್ಲಿ 31-3-1998ರಂದು ಹೊರಡಿಸಲಾದ ಎಫ್‌ಡಿ 34ಸಿಇಟಿ 98 (1ರಿಂದ5)ನೇ ಸಂಖ್ಯೆಯ ಅಧಿಸೂಚನೆಗಳು

3) ಹೊಸ ಮಾಹಿತಿ ತಂತ್ರಜ್ಞಾನ ಕೈಗಾರಿಕೆ ಘಟಕಗಳು ತಯಾರಿಸುವ ವಸ್ತುಗಳ ಮೇಲೆ ನೀಡಿರುವ ಮಾರಾಟ ತೆರಿಗೆಗೆ ಕೆಲವು ನಿರ್ಬಂಧಗಳನ್ನು ಹಾಕುವ ಹಿನ್ನಲೆಯಿಂದ 10-2-1999ರಂದು ಹೊರಡಿಸಲಾದ ಎಫ್‌ಡಿ 192ಸಿಎಸ್‌ಎಲ್ 98 (5)ನೇ ಸಂಖ್ಯೆಯ ಅಧಿಸೂಚನೆ 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಪ್ರಕರಣ 39 ಮೇರೆಗೆ

4) ಕಂಪ್ಯೂಟರ್ ಸಾಫ್ಟ್‌ವೇರ್ ಸೀಮೆವಣ್ಣೆ ಸ್ಟೊವ್ ಗೃಹಬಳಕೆಯ ಅಲ್ಯುಮಿನಿಯಂ ವಸ್ತುಗಳು ಮುಂತಾದ ವಸ್ತುಗಳ ಮಾರಾಟದ ಮೇಲೆ ವಿನಾಯಿತಿಯನ್ನು ನೀಡಿರುವ ಸಂಬಂಧದಲ್ಲಿ 31-3-1998ರಂದು ಹೊರಡಿಸಲಾದ ಎಫ್‌ಡಿ 33 ಸಿಎಸ್‌ಎಲ್ 98ನೇ (1ರಿಂದ15ಸಂಖ್ಯೆಯ)ಅಧಿಸೂಚನೆಗಳು

5) ರಾಜ್ಯದಲ್ಲಿ ಹೊಸ ಮಾಹಿತಿ ತಂತ್ರಜ್ಞಾನ ಕೈಗಾರಿಕಾ ಘಟಕಗಳು ತಯಾರಿಸುವ ವಸ್ತುಗಳ ಮೇಲಿನ ಮಾರಾಟ ತೆರಿಗೆಯನ್ನು ವಿನಾಯಿತಿ ನೀಡುವ ಸಂಬಂಧದಲ್ಲಿ 10-2-1999ರಂದು ಹೊರಡಿಸಲಾದ ಎಫ್‌ಡಿ192 ಸಿಎಸ್‌ಎಲ್ 98 (1ರಿಂದ4)ಸಂಖ್ಯೆಯ ಅಧಿಸೂಚನೆಗಳು

6) 30-3-1996ರಂದು ಹೊರಡಿಸಿದ ಎಫ್‌ಡಿ 35ಸಿಎಸ್‌ಎಲ್ 96 (9)ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡುವ ಸಂಬಂಧದಲ್ಲಿ 19-2-1999ರಂದು ಹೊರಡಿಸಲಾದ ಎಫ್‌ಡಿ 159 ಸಿಎಸ್‌ಎಲ್ 98ನೇ ಅಧಿಸೂಚನೆ

7) ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಜಿಣಗೆರ ಗ್ರಾಮದಲ್ಲಿನ ಮೆಸ್ಸರ್ಸ್ ಕಲ್ಯಾಣಿ ಸ್ಟೀಲ್ಸ್ ಲಿಮಿಟೆಡ್ ಸಂಸ್ಥೆಯು ತಯಾರಿಸುವ ವಸ್ತುಗಳ ಮೇಲಿನ ಮಾರಾಟ ತೆರಿಗೆಗೆ ವಿನಾಯಿತಿ ನೀಡುವ ಸಂಬಂಧಲ್ಲಿ 20-2-1999ರಂದು ಹೊರಡಿಸಲಾದ ಎಫ್‌ಡಿ 195 ಸಿಎಸ್‌ಎಲ್ 98 (1 ಮತ್ತು 2 ಸಂಖ್ಯೆಯ ಅಧಿಸೂಚನೆಗಳು.)

8) ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಜಿಣಿಗೆರ ಗ್ರಾಮದಲ್ಲಿರುವ ಮೆಸರ್ಸ್ ಮುಕುಂದ ಲಿಮಿಟೆಡ್ ಸಂಸ್ಥೆಯು ತಯಾರಿಸುವ ವಸ್ತುಗಳ ಮೇಲೆ ಮಾರಾಟ ತೆರಿಗೆಗೆ ವಿನಾಯಿತಿ ನೀಡುವ ಸಂಬಂಧದಲ್ಲಿ 5-2-1999ರಂದು ಹೊರಡಿಸಲಾದ ಎಫ್‌ಡಿ 126ಸಿಎಸ್‌ಎಲ್ 98 (1ರಿಂದ3)ಸಂಖ್ಯೆಯ ಅಧಿಸೂಚನೆಗಳು 1978 ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ

9) 1999ರ ಕರ್ನಾಟಕ ನಾಗರೀಕ ಸೇವೆಗಳು ಪರಿಷ್ಕೃತ ವೇತನ ನಿಯಮಗಳನ್ನು ರಚಿಸುವ ಸಂಬಂಧದಲ್ಲಿ 18ನೇ ಜನವರಿ1999ರಂದು ಹೊರಡಿಸಲಾದ ಎಫ್‌ಡಿ2 ಎಸ್.ಆರ್.ಪಿ. 99ನೇ ಸಂಖ್ಯೆಯ ಅಧಿಸೂಚನೆ 1976ರ ಕರ್ನಾಟಕ ವೃತ್ತಿ ತೆರಿಗೆ ಕಾಯ್ದೆ ಪ್ರಕರಣ 33ರ ಮೇರೆಗೆ

10) ಶಿಕ್ಷಣ ಸಂಸ್ಥೆಗಳು ಶೀಘ್ರಲಿಪಿ ಮತ್ತು ಬೆರಳಚ್ಚು ಸಂಸ್ಥೆಗಳ ಮೇಲಿನ ವೃತ್ತಿ ತೆರಿಗಯಲ್ಲಿ ವಿನಾಯಿತಿ ನೀಡುವ ಸಂಬಂಧದಲ್ಲಿ 31-3-1998ರಂದು ಹೊರಡಿಸಲಾದ ಎಫ್‌ಡಿ1ಸಿಪಿಟಿ 98 (1ರಿಂದ3) ಸಂಖ್ಯೆಯ ಅಧಿಸೂಚನೆಗಳು 1932 ರ ಮೈಸೂರು ಪಣ ತೆರಿಗೆ ಕಾಯ್ದೆ ಪ್ರಕರಣ 10(2)ರ ಮೇರೆಗೆ

11) ಬೆಂಗಳೂರು ಮತ್ತು ಮೈಸೂರು ನಗರದ ಪರವಾನಗಿಗಳ ಸಂಬಂಧದಲ್ಲಿ ಅವರು ನೀಡಬೇಕಾಗಿರುವ ಹಣದ ಮೊತ್ತವನ್ನು ನಿಗಧಿಪಡಿಸಿರುವ ಸಂಬಂಧದಲ್ಲಿ 31-3-1998ರಂದು ಹೊರಡಿಸಾದ ಎಫ್‌ಡಿ 2ಸಿಆರ್‌ಸಿ 98ನೇ ಕ ಸಂಖ್ಯೆ ಅಧಿಸೂಚನೆ

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು)ಅವರ ಪರವಾಗಿ ಶ್ರೀ ಎಂ.ಪಿ. ಪ್ರಕಾಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆ ಸಚಿವರು1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ 194 (1)ಮತ್ತು (2)ನೇ ಪ್ರಕರಣದ ಮೇರೆಗೆ

12) ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕಿನ 30 ಗ್ರಾಮಗಳಲ್ಲಿ 1997-98ನೇ ಸಾಲಿನ ಭೂ ಕಂದಾಯ ಮನ್ನಾ ಮಾಡಿ 1.3.99ರಂದು ಹೊರಡಿಸಿದ ಆರ್‌ಟಿ 357 ಟಿಆರ್ ಎಂ 98ನೇ ಸಂಖ್ಯೆಯ ಅಧಿಸೂಚನೆ

13) ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ 13 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ಮನ್ನಾ ಮಾಡುವ ಸಂಬಂಧದಲ್ಲಿ 1-3-1999ರಂದು ಹೊರಡಿಸಿದ ಆರ್‌ಡಿ 349 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ

ಉಪಾಧ್ಯಕ್ಷರು ಕಾಗದ ಪತ್ರಗಳನ್ನು ಮಂಡಿಸಲಾಯಿತು

3 ಪ್ರಕಟಣೆ

ಉಪಾಧ್ಯಕ್ಷರು ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ:

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಯ ನಿಯಮ 118ರ ಮೇರೆಗೆ ದಿನಾಂಕ : 30-3-99ರಂದು ವಿಧಾನ ಪರಿಷತ್ತು ಈ ಕೆಳಕಂಡ ವಿಷಯಗಳನ್ನು ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿದೆ ಎಂದು ಈ ಮೂಲಕ ತಿಳಿಸುತ್ತೇನೆ.

1) ಕರ್ನಾಟಕ ಧನವಿನಿಯೋಗ ವಿಧೇಯಕ 1999
2) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ 1999
3) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ 1999
4) ಕರ್ನಾಟಕ ತೆರಿಗೆ ಕಾನೂನುಗಳ (ಎರಡನೇ ತಿದ್ದುಪಡಿ) ವಿಧೇಯಕ1999
5) ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ 1999
6) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ 1999

4. ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕಗಳನ್ನು ಮಂಡಿಸುವುದು

(1) ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ತಿದ್ದುಪಡಿ ವಿಧೇಯಕ 1999 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) :- ಮಾನ್ಯ ಉಪಾಧ್ಯಕ್ಷರೆ 1999ರ ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು :- ಪ್ರಸ್ತಾವ ಏನೆಂದರೆ:-

1999ರ ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ):